SERVICE ABOVE SELF



2025-26

Rotary

विश्वमित्रः

# ವಿಶ್ವಮಿತ್ರ

# VISHWAMITHRA

Weekly House Bulletin of Rotary Club Shimoga, R.I. Dist. 3182

UNITE FOR GOOD

Rotary

Rtn. Francesco Arezzo
RI President 2025-26

| Rtn. K. Palaksha | Rtn. Anand R. | Rtn. Vishwas Y. | Rtn. M. Madhavachar |
|---|---|---|---|
| District Governor 2025-26 | President, Mob: 99800 93066 | Secretary, Mob : 99800 63180 | Bulletin Editor, Mob: 98862 73495 |

We meet every Wednesday at 6.45p.m. at Rotary Youth Centre, Sowlanga Road, L.B.S.Nagar, Shivamogga- 577 204

ಸಂಪುಟ – 68 ಸಂಚಿಕೆ –33 ದಿನಾಂಕ : 23–02–2026


ರೋಟರಿಯು ಫೆಬ್ರವರಿ ಮಾಸವನ್ನು ವಿಶ್ವ ಅರಿವಿನ ಮತ್ತು ಶಾಂತಿ ಮಾಸಾಚರಣೆ ಎಂಬುದಾಗಿ ವಿಶ್ವದಾದ್ಯಂತ ಆಚರಿಸುತ್ತಿದ್ದು, ಪ್ರತೀ ವರ್ಷವೂ ಫೆಬ್ರವರಿ 23ನ್ನು ವಿಶ್ವಅರಿವಿನ ದಿನವನ್ನಾಗಿ ಆಚರಿಸುತ್ತಿದೆ. ಅಂತೆಯೇ ದಿನಾಂಕ: 23.02.2026 ರಂದು ನಗರದ ಕಾಸ್ಮೋ ಕ್ಲಬ್‌ನಲ್ಲಿ ರೋಟರಿ ಜೋನ್ 10 ಮತ್ತು 11 ರ ರೋಟರಿ ಕ್ಲಬ್‌ಗಳ ಜೊತೆಗೂಡಿ ಸಂಜೆ 7.00 ಕ್ಕೆ ಬೃಹತ್ ಸಭೆಯೊಂದನ್ನು ವಿಶ್ವ ಅರಿವಿನ ಮತ್ತು ಮತ್ತು ಶಾಂತಿ ದಿನವನ್ನಾಗಿ ಆಯೋಜಿಸಿ ಆಚರಿಸಲಾಯಿತು.

ಅಂದಿನ ಸಭೆಯ ವೇದಿಕೆಯಲ್ಲಿ ರೋಟರಿ ಜೋನ್ 10 ಮತ್ತು 11 ರ ರೋಟರಿ ಕ್ಲಬ್‌ನ ಎಲ್ಲಾ ಅಧ್ಯಕ್ಷರು, ಜೋನಲ್ ಟ್ರೈನರ್ಸ್ ಅಂದಿನ ಸಭೆಯ ಕೇಂದ್ರ ಬಿಂದು ಖ್ಯಾತ ಜಾದೂಗಾರರು, ವಾಗ್ಮಿಗಳು, ಚಿತ್ರನಟರೂ ಆಗಿರುವ ಶ್ರೀ ಓಂ ಗಣೇಶ್ ಉಪ್ಪುಂದ ಇವರು ಮುಖ್ಯ ಅತಿಥಿಗಳಾಗಿ ಉಪಸ್ಥಿತರಿದ್ದು, ವಿಶ್ವ ಅರಿವಿನ ದಿನಾಚರಣೆ ಮಹತ್ವವನ್ನು ಸಾರಿದರು. ಲೀಡ್ ಕ್ಲಬ್ ಮಲೆನಾಡು ರೋಟರಿ ಕ್ಲಬ್‌ನ ಅಧ್ಯಕ್ಷರಾದ ರೊ. ಪ್ರಕಾಶ್, ಸಹಾಯಕ ಗವರ್ನರ್ ರೊ.ಕೆ.ಪಿ. ಶೆಟ್ಟಿ, ಚುನಾಯಿತ ಗವರ್ನರ್ ರೊ. ವಸಂತ್ ಹೋಬಳೀದಾರ್, ನಮ್ಮ ಕ್ಲಬ್‌ನ ಅಧ್ಯಕ್ಷರಾದ ರೊ. ಆನಂದ್ ಆರ್., ರೊ. ಹೆಚ್.ಎಸ್. ಮೋಹನ್ ಇವರುಗಳೆಲ್ಲಾ ಕ್ಲಬ್‌ನ ಅಧ್ಯಕ್ಷರೊಂದಿಗೆ ವೇದಿಕೆಯಲ್ಲಿದ್ದರು.

ಮಕ್ಕಳ ಭರತನಾಟ್ಯ ಕಾರ್ಯಕ್ರಮದೊಂದಿಗೆ ಸಭೆಯು ಆರಂಭವಾಯಿತು. ರಾಷ್ಟ್ರಗೀತೆಯಾದ ನಂತರ ರೊ.ಉಮಾ ಕುಲಕರ್ಣಿಯವರ ಪ್ರಾರ್ಥನೆ ಮಾಡಿದರು. ಜೋನ್ 10 ರ ಸಹಾಯಕ ಗವರ್ನರ್ ರೊ. ಕೆ.ಪಿ.ಶೆಟ್ಟಿಯವರಿಂದ ಸ್ವಾಗತವಾಯಿತು. ರೊ. ಉಜ್ವಲ ರವಿಯವರು ಚುನಾಯಿತ ಗವರ್ನರ್ ಹಾಗೂ ಅಂದಿನ ಪ್ರಸ್ತಾವಿಕ ಭಾಷಣಕಾರರಾದ ರೊ.ವಸಂತ ಹೋಬಳೀದಾರ್‌ರವರ ಪರಿಚಯ ಮಾಡಿದರು. ಚುನಾಯಿತ ಗವರ್ನರ್ ರೊ.ವಸಂತ ಹೋಬಳೀದಾರ್‌ರವರು ಮಾತನಾಡುತ್ತಾ, ಇದು ರೋಟರಿಯ 121 ನೇ ವರ್ಷದ ವಾರ್ಷಿಕೋತ್ಸವ ಹಾಗೂ ಹಬ್ಬವಾಗಿದೆ. ಕೇವಲ 4 ಜನರಿಂದ ಸೌಹಾರ್ದಕ್ಕಾಗಿ ಪ್ರಾರಂಭವಾದ ಈ ಸಂಘಟನೆ ಸುಮಾರು 200 ಕ್ಕೂ ಹೆಚ್ಚು ದೇಶಗಳಲ್ಲಿದೆ. ರೋಟರಿಯು ಹುಟ್ಟಿದ ನಂತರದ ದಿನಗಳಲ್ಲಿ ಹೈಸ್ಕೂಲ್ ಮಕ್ಕಳಿಗೆ ಇಂಟರಾಕ್ಟ್ ಮತ್ತು ಯುವಕ/ಯುವತಿಯರಿಗೆ ರೋಟರಾಕ್ಟ್ ಬಂದಿತು. ಇಲ್ಲಿ ಸಮಾಜದೊಂದಿಗಿನ ಒಡನಾಟ ಮುಖ್ಯವಾಗಿರುತ್ತದೆ. ಹಾಗೆಯೇ ರೋಟರಿಗೆ 120 ವರ್ಷಕಳೆದಿದೆ. ಭಾರತಕ್ಕೆ ಸ್ನೇಹ ಕಷ್ಟವಲ್ಲ. ಪ್ರತಿ ಹಳ್ಳಿಯಲ್ಲಿ, ಎಲ್ಲರೂ ಪರಿಚಯವಿದ್ದು ಅಲ್ಲಿ ಸ್ನೇಹಕ್ಕೇನೂ ಕೊರತೆಯಿರುವುದಿಲ್ಲ. 1905




ರಲ್ಲಿ ಪ್ರಾರಂಭವಾದ ರೋಟರಿಯಲ್ಲಿ 1917 ನೇ ಇಸವಿಯಲ್ಲಿ ರೋಟರಿ ಫೌಂಡೇಷನ್ ಸ್ಥಾಪನೆಯಾಗಿ ಹಲವಾರು ಸಮಾಜಮುಖಿ ಕೆಲಸವನ್ನು ಮಾಡಿದೆ, ಮಾಡುತ್ತಲೂ ಇದೆ. ಮೊದಲು ಅಮೇರಿಕೆಯಲ್ಲಿ ಕಂಫರ್ಟ್‌ಜೋನ್ ಆರಂಭಿಸಿ, ನಂತರ ಮ್ಯಾಚಿಂಗ್ ಗ್ರಾಂಟ್, ಗ್ಲೋಬಲ್ ಗ್ರಾಂಟ್ ಮೂಲಕ 850 ಕೋಟಿ ಜನರಿರುವ ಪ್ರಪಂಚದಲ್ಲಿ

## ಈ ವಾರದ ಸಭೆ

**ಬದಲಾದ ಸ್ಥಳವನ್ನು ಗಮನಿಸಿ**

**ರೋಟರಿ ಆಶಾಕಿರಣದ**
**44ನೇ ವಾರ್ಷಿಕ ಸರ್ವ ಸದಸ್ಯರ ಸಭೆ**

**ದಿನಾಂಕ: 04–03–2026, ಬುಧವಾರ**
**ಸಮಯ: ಸಂಜೆ 7 ಗಂಟೆಗೆ**
**ಸ್ಥಳ: ಆಶಾಕಿರಣ ಬುದ್ಧಿಮಾಂದ್ಯ ಮಕ್ಕಳ ವಸತಿ ಶಾಲೆ**
ವಿದ್ಯಾನಗರ, ಶಿವಮೊಗ್ಗ

**ಅಧ್ಯಕ್ಷತೆ:**
**ಡಾ. ರಜನಿ ಪೈ**

ತಾವುಗಳು ಸಮಯಕ್ಕೆ ಸರಿಯಾಗಿ ಹಾಜರಿದ್ದು, ತಮ್ಮ ಅಮೂಲ್ಯ ಸಲಹೆ, ಸೂಚನೆ ನೀಡಿ, ಸಭೆಯನ್ನು ಯಶಸ್ವಿಗೊಳಿಸಿಕೊಡಬೇಕಾಗಿ ಕೋರಲಾಗಿದೆ.

**ರೋಟರಿ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕಾಗಿ ವಿನಂತಿ.**







ಸಾಮಾಜಿಕ ಕಾರ್ಯಗಳು, ಶಾಲೆಗಳಿಗೆ ನೆರವು ಜೊತೆಗೆ ಪೋಲಿಯೋ ನಿರ್ಮೂಲನದಂತಹ ಕೆಲಸಗಳು ಒಗ್ಗಟ್ಟಿನಿಂದ ನೆರವೇರಿದೆ. ಸ್ವಹಿತ ಮೀರಿದ ಸೇವೆ ಆಗುತ್ತಿದೆ. ಆದರೆ 1200000 ಸದಸ್ಯತ್ವದಿಂದ ನಾವು ಮುಂದೆ ಹೋಗುತ್ತಿಲ್ಲ. ಇದಕ್ಕೆ ಕಾರಣ ತಿಳಿಯದು ಎಂದರು. ಈ ಸಂದರ್ಭದಲ್ಲಿ ಕೃಷ್ಣ ಕರ್ಣ ಮತ್ತು ಅರ್ಜುನರ ದಾನದ ಕಥೆಯನ್ನು ಹೇಳಿದ ರೊ.ವಸಂತ ಹೋಬಳೀದಾರ್‌ರವರು ನಮ್ಮ ಸಮಾಜ ಮುಖಿ ಸೇವೆಗಳು ಮುಂದುವರೆಯಬೇಕು. ರೋಟರಿಯನ್ನು ಜನರ ಮನಸ್ಸಿಗೆ ತಲುಪಿಸಬೇಕು. ನಾವು ಸಮಾಜದ ಭಾಗವಾಗಿ ಕೆಲಸ ಮಾಡಬೇಕು. 125 ವರ್ಷಗಳ ಸಾಧನೆ ಮುಂದುವರೆಯಬೇಕು. ತನ್ಮೂಲಕ ಸಮಾಜದಲ್ಲಿ ಶಾಂತಿ, ವಿಶ್ವ ಅರಿವು ಮೂಡಬೇಕು. ಶಾಂತಿಗಾಗಿ ಪದವಿ ವಿದ್ಯಾರ್ಥಿಗಳ ಪಡೆಯೊಂದನ್ನು ಕಟ್ಟಲಾಗುತ್ತಿದೆ ಎಂಬ ಮಾಹಿತಿ ನೀಡಿದರು.

ಮುಖ್ಯ ಅತಿಥಿಗಳಾದ ಶ್ರೀ ಓಂ ಗಣೇಶ್ ಉಪ್ಪುಂದ ಹಾಗೂ ವೇದಿಕೆಯಲ್ಲಿದ್ದ ಎಲ್ಲಾ ಗಣ್ಯಮಾನ್ಯರಿಂದ ದೀಪ ಪ್ರಜ್ವಲನೆಯಾಗಿ ಕಾರ್ಯಕ್ರಮದ ಉದ್ಘಾಟನೆಯಾಯಿತು.

ರೊ. ಹರ್ಷಕಾಮತ್‌ರವರು ಮುಖ್ಯ ಅತಿಥಿಗಳ ಪರಿಚಯ ಮಾಡಿದರು. ಈವರೆವಿಗೂ ಶ್ರೀಯುತರ ಈ ತರಹದ 132 ಕಾರ್ಯಕ್ರಮಗಳಾಗಿವೆ. 90 ರ ದಶಕದಲ್ಲಿ ಜಾದೂಗಾರರಾಗಿ. ಚಲನಚಿತ್ರ ನಟರಾಗಿ, ಸೆಲೆಬ್ರಿಟಿಯಾಗಿ, ರೋಲ್ ಮಾಡೆಲ್ ಆದವರು. ಮೂಲತಃ ಇವರು ರಂಗಾಸಕ್ತಿ ಇರುವವರು. ಇವರ ನಿಜ ನಾಮಧೇಯ ಶ್ರೀ ಗಣೇಶ್‌ಕಾಮತ್. ಇವರು ಜಾದೂಗಾರರು, ರಂಗ ಕರ್ಮಿಗಳು, ಅಂಕಣ ಬರಹಗಾರರು, ಉತ್ತಮ ವಾಗ್ಮಿಗಳು, ದಕ್ಷಿಣ ಕನ್ನಡ ಜಿಲ್ಲೆ ಕುಂದಾಪುರದ ಬೈಂದೂರು ಹತ್ತಿರದ ಉಪ್ಪುಂದದವರು. ಕನ್ನಡದ ಅಪರೂಪದ ವ್ಯಕ್ತಿ. ಕರ್ನಾಟಕದ ಪ್ರತಿನಿಧಿಯಾಗಿ 40 ಕ್ಕೂ ಹೆಚ್ಚು ರಾಷ್ಟ್ರಗಳಲ್ಲಿ ಜಾದೂ ಪ್ರದರ್ಶನ ನೀಡಿದ್ದಾರೆ. ಅದನ್ನು 16 ಲಕ್ಷಕ್ಕೂ ಹೆಚ್ಚು ಮಕ್ಕಳು ವೀಕ್ಷಿಸಿದ್ದಾರೆ. 25 ಕ್ಕೂ ಹೆಚ್ಚು ನಾಟಕಗಳು, 150 ಕ್ಕೂ ಹೆಚ್ಚು ಆರ್ಕೆಸ್ಟ್ರಾ, ಅನಾಮಿಕ, ಅನಂತನ ಅವಾಂತರ, ಮುಂತಾದ ಕಾಶೀನಾಥರ ಸಿನಿಮಾಗಳಲ್ಲಿ ನಟನೆ ಮಾಡಿರುತ್ತಾರೆ. ತಮ್ಮ ಶಾಡೋ ಪ್ಲೇನಿಂದ ರಾಷ್ಟ್ರದಾದ್ಯಂತ ಮನ್ನಣೆಗಳಿಸಿದ್ದಾರೆ. ಇವರಿಗೆ ಸಾಂಸ್ಕೃತಿಕ ಕ್ಷೇತ್ರದಲ್ಲಿ 200 ಕ್ಕೂ ಹೆಚ್ಚು ಸನ್ಮಾನಗಳಾಗಿವೆ. ಹಲವಾರು ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳು ದೊರಕಿವೆ. ಆಳ್ವಾಸ್ ನುಡಿಸಿರಿ ಗೌರವಾಧ್ಯಕ್ಷರಾಗಿದ್ದು, ಮತ್ತಿತರ ಸಂಘ ಸಂಸ್ಥೆಗಳಲ್ಲಿ ಗೌರವ ಸಲಹೆಗಾರರಾಗಿದ್ದಾರೆ. ಇಂದಿಗೂ ತಮ್ಮ ಹಳ್ಳಿಯಲ್ಲೇ ನೆಲೆಸಿದ್ದಾರೆ. ಎಂದಿನಂತೆ ಸವಾಜಕ್ಕೆ ರೋಟರಿಯುಂಥಹ ಸಂಸ್ಥೆಗಳಿಗೆ ಪ್ರೇರಣಾದಾಯಕ ಸಂಪನ್ಮೂಲ ವ್ಯಕ್ತಿಗಳಾಗಿದ್ದಾರೆ ಎಂದರು.

ಮುಖ್ಯ ಅತಿಥಿಗಳಾದ ಶ್ರೀ ಓಂಗಣೇಶ್‌ರವರು ಮಾತನಾಡಿ, ಶಿವಮೊಗ್ಗದ ಮಲೆನಾಡಿಗೆ ನಮಗೂ ಹೆಚ್ಚು ದೂರವಿಲ್ಲ. ದಕ್ಷಿಣ ಕನ್ನಡ ಜಿಲ್ಲೆಗಳು ಶಿವಮೊಗ್ಗ ಜಿಲ್ಲೆಗಳು ಅಕ್ಕ ತಂಗಿಯರಿದ್ದಂತೆ. ಇಂದು ನನಗೆ ಮನೋವಿಕಾಸದ ಬಗ್ಗೆ ಮಾತನಾಡಲು ಕರೆದಿದ್ದಾರೆ. ಅದು ನನಗೆ ಹೊಸ ಸ್ಫೂರ್ತಿ ನೀಡಿದೆ. 15 ಲಕ್ಷ ಸಾಮಾಜಿಕ ಜವಾಬ್ದಾರಿ ಇರುವ, ಸಾಮಾಜಿಕ ಕಾಳಜಿ ಇರುವ ಸದಸ್ಯರನ್ನು ಹೊಂದಿರುವ, ವಿಶ್ವದಾದ್ಯಂತ ಇರುವ ರೋಟರಿ ಕ್ಲಬ್‌ನ ಶಿವಮೊಗ್ಗದ ವಿವಿಧ ರೋಟರಿ ಶಾಖೆಗಳ 350 ಜನರು ಇಂದು ಇಲ್ಲಿಗೆ ಬಂದಿದ್ದಾರೆ. ಇಲ್ಲಿರುವವರು ಹಿರಿಯರು. ಅವರಲ್ಲಿನ ಪ್ರತಿಯೊಬ್ಬರ ಚಿಂತನೆಯು ಶ್ರೇಷ್ಟ ಮಟ್ಟದ್ದು. ಚಿಂತನೆ ಇದ್ದವನು ಮಾತ್ರ ವಿಕಾಸಗೊಳ್ಳಲು ಸಾಧ್ಯ. ನಮ್ಮ ಚಿಂತನೆಯಿಂದ ನಮ್ಮ ಪ್ರೌಢಿಮೆ, ಪ್ರಜ್ಞೆ ಜಾಸ್ತಿಯಾಗುತ್ತದೆ. ಸಮಾಜದ ಕೊಂಡಿಯಾಗಿರುವ ನಾವುಗಳು ಸಮಾಜದ ಚಿಂತನೆಯನ್ನು ಬದಲಾಯಿಸಲು ಸಾಧ್ಯವಿದೆ. ನಮ್ಮೊಳಗಿನ ಚಿಂತನೆ ನಮಗೇ ಪ್ರೇರಣೆಯಾಗಿ ಇದರಿಂದ ಜಗತ್ತನ್ನು ಅರಿಯಲು ಸಾಧ್ಯವಾಗುತ್ತದೆ ಎಂದರು.

ಇಂದು ನಾವುಗಳು ನಮಗಾಗಿ ದುಡಿಯುತ್ತಿಲ್ಲ. ನಮ್ಮ ಹೆಂಡತಿ ಮಕ್ಕಳಿಗಾಗಿ, ನಮ್ಮ ಕಂಟ್ರಾಕ್ಟರುಗಳಿಗಾಗಿ, ನಮ್ಮ ಅಧೀನರಿಗಾಗಿ, ನಮ್ಮೊಂದಿಗೆ ಕೆಲಸ ಮಾಡುವವರಿಗಾಗಿ, ನಾವು ಯಾರೊಂದಿಗೆ ಕೆಲಸ ಮಾಡುತ್ತೇವೋ ಅವರಿಗಾಗಿ, ಜೊತೆಗೆ ಇಡೀ ಜಗತ್ತಿಗಾಗಿ ದುಡಿಯುತ್ತಿದ್ದೇವೆ. ಇದಕ್ಕಾಗಿ ನಮ್ಮ ಜಗತ್ತನ್ನು ನಾವು ಅರಿಯುವ ಅಗತ್ಯವಿದೆ. ದುಡಿಯುವ ಹಿಂದಿನ ಜಗತ್ತನ್ನು ಅರಸುತ್ತಾ ಹೆಜ್ಜೆ ಹೆಜ್ಜೆಗೂ ಜಗತ್ತಿನೊಳಗೊಂದಾಗಿ ಸಾಗುತ್ತಿದ್ದೇವೆ. ಒಟ್ಟಿನಲ್ಲಿ ಎಲ್ಲವೂ ಕಲಸು ಮೇಲೋಗರವಾಗಿ ಚಿತ್ರಾನ್ನವಾಗುತ್ತಿದ್ದೇವೆ.

ನಿಜ ಜಗತ್ತಿನ ಚಿತ್ರಾನ್ನ ತಿನ್ನಲು ಅಥವಾ ಸೇವಿಸಲು ಭಾಷೆ ಬೇಕಿಲ್ಲ. ಹಾಗಾದರೆ ಆ ಭಾಷೆ ಯಾವುದು? ಅದು ವಿಶ್ವ ಭಾಷೆಯಾಗಿರಬೇಕು. ಅದು ಇಂಗ್ಲೀಷೇ, ಸಂಸ್ಕೃತವೇ ಯಾವುದು? ಅದು ಜಗತ್ತಿನೆಲ್ಲೆಡೆಯ ಭಾಷೆ. ಅದೇ ಹೃದಯದ ಭಾಷೆ. ಜಗತ್ತನ್ನು ಅರಿಯಲು ಹೃದಯದ ಭಾಷೆ ಬೇಕು. ತಾವೊಮ್ಮೆ ಜೋರ್ಡಾನ್‌ಗೆ ಹೋದಾಗ ಆದ ತಮ್ಮ ಅನುಭವಕ್ಕೆ ಹೊರಳಿದ ಅವರು, ತಮ್ಮನ್ನು ಟ್ಯಾಕ್ಸಿಯಲ್ಲಿ ಕರೆದೊಯ್ದ ಡ್ರೈವರ್ ಬಗ್ಗೆ ಹೇಳುತ್ತಾ, ಹಣಕೊಡಲು ಚಿಲ್ಲರೆಗಾಗಿ ತಡಕಾಡುತ್ತಿರುವುದನ್ನು ಮನಗಂಡ ಡ್ರೈವರ್ ಒಂದು ವಾರಗಳ ಕಾಲ ತಾನು ಇಲ್ಲೇ ಎಲ್ಲೋ ಇರುತ್ತೇನೆ. ನನ್ನ ಹಣವನ್ನು ನಿಮ್ಮಿಂದ ಪಡೆಯುತ್ತೇನೆ ಎಂದು ಹೇಳಿದಾಗ ಆತ ತಾನು ಬೇರೆ ದೇಶದವನು ಎಂದು ಪರಿಗಣಿಸಲಿಲ್ಲ. ಇದೇ ಹೃದಯದ ಭಾಷೆ ಎಂದರು. ಆದರೆ ನಾವೆಲ್ಲರೂ ಪೂರ್ವಾಗ್ರಹದಿಂದ ಹೊರಬರಬೇಕು. ಹೊಸ ಕನ್ನಡಕ ಹಾಕಿಕೊಳ್ಳಬೇಕು. ನಮ್ಮ ಒಳಗಣ್ಣಿನ ದೃಷ್ಟಿಯಿಂದ ನೋಡಬೇಕು ಎನ್ನುತ್ತಾ ತಮ್ಮ ಊರಿನ ರಾಷ್ಟ್ರೀಯ ಹೆದ್ದಾರಿಯೊಂದರಲ್ಲಿ ಆದ ಅಪಘಾತದ ಘಟನೆ. ತಮ್ಮ ಮನೆಯೆದುರೇ ಆದ ಭಿಕ್ಷುಕರ ಘಟನೆಯನ್ನು ತುಂಬಾ ಮಾರ್ಮಿಕವಾಗಿ ವಿವರಿಸಿದ ಮುಖ್ಯ ಅತಿಥಿ ಶ್ರೀ ಓಂಗಣೇಶರವರು, ಇವುಗಳಿಗೆಲ್ಲಾ ಹೃದಯದ ಭಾಷೆ ಸೇರಿದರೆ ಶಾಂತಿಯ ಮಾತಾಗುತ್ತದೆ. ನಾವು ಎಲ್ಲವನ್ನೂ ಪೂರ್ವಾಗ್ರಹದಿಂದ ಪರಾಂಬರಿಸುತ್ತೇವೆ. ಅದನ್ನು ಬಿಟ್ಟು ಹೃದಯದ ಭಾಷೆಯನ್ನು ಕಲಿತು ಯಶಸ್ವಿಯಾಗಲು ನಾವುಗಳು ತೀರ್ಮಾನ ಮಾಡಬೇಕು. ವ್ಯಾಪಾರದಲ್ಲಿ ಇದನ್ನು ಅಳವಡಿಸಲು ನಾವು ತೀರ್ಮಾನ ಮಾಡಬೇಕು. ಆಗ ಜನ ನಮ್ಮನ್ನು ತೀರ್ಮಾನಿಸುತ್ತಾರೆ ಎಂದರು.

ನಾವು ಯಾರ ಬಗ್ಗೆಯೇ ಆಗಲಿ ಒಳ್ಳೆಯ ಮಾತನ್ನೇ ಆಡಬೇಕು. ಅವರ ಬಗ್ಗೆ ಒಳ್ಳೆಯದನ್ನೇ ಹೇಳುತ್ತಾ ಹೋಗಬೇಕು. ಅವರ ಹಿಂದಿನಿಂದಲೂ ಕೂಡ, ಇನ್ನೊಬ್ಬರ ಒಳ್ಳೆಯಗುಣಗಳನ್ನೆ ಒಳ್ಳೆಯದನ್ನೇ ಹೇಳುತ್ತಾ ಹೋದಲ್ಲಿ ನಮಗೆ ಧನಾತ್ಮಕ ಅಂಶಗಳು ಲಭ್ಯವಾಗಿ

**ನೀವು ಅತ್ಯುತ್ತಮ ರೋಟರಿ ಸದಸ್ಯರೆಂದಾದರೆ ಪ್ರತಿ ವಾರದ ಸಭೆಗೆ ತಪ್ಪದೇ ಬನ್ನಿ**













ಋಣಾತ್ಮಕ ಅಂಶಗಳು ಮರೆಯಾಗುತ್ತವೆ. ಇದರಿಂದ ಜಗತ್ತಿನ ಅರಿಯುವಿಕೆಗೆ ನಾಂದಿಯಾಗುತ್ತದೆ. ನಾವುಗಳು ಒಳ್ಳೆಯದನ್ನು ಹೇಳುವ ಅಭ್ಯಾಸ ಮಾಡಿಕೊಳ್ಳಬೇಕು. ನಾವು ಒಳ್ಳೆಯದನ್ನು ಮಾಡಿದಲ್ಲಿ ಇಡೀ ರಾಷ್ಟ್ರ ಒಳ್ಳೆಯ ಹೆಸರು ಪಡೆಯುತ್ತೆ. ನಮ್ಮ ಯಶಸ್ಸು ಮತ್ತು ನೆಮ್ಮದಿ ಕಂಡು ಹೊರಗಿನವರು ಮಾತನಾಡಬೇಕು. ಅಂದರೆ ಮಾನವ ಜಗತ್ತು ನಮ್ಮನ್ನು ಅರ್ಥಮಾಡಿಕೊಳ್ಳಬೇಕು. ನಮ್ಮ ಮನಸ್ಸಿನ ಪ್ರೀತಿ ಅರ್ಥಮಾಡಿಕೊಳ್ಳಬೇಕು. ನಾನು ನನ್ನನ್ನು ಅರಿತುಕೊಳ್ಳಬೇಕು. ನನ್ನಅರಿವು ನನಗಾದರೆ ಜಗತ್ತಿನ ಅರಿವಾಗುತ್ತದೆ. ನಮ್ಮ ಕಣ್ಣುಗಳಲ್ಲಿ ಪ್ರಪಂಚದ ಸೌಂದರ್ಯವಿದೆ. ನಾನು ಬದಲಾದರೆ ಜಗತ್ತು ಬದಲಾಗುತ್ತದೆ. ಬಾಲ್ಯದ ವಿಕಾಸ ಇನ್ನಷ್ಟು ವಿಕಸಿತಗೊಳಿಸುವುದೇ ಸಂಸ್ಕೃತಿ. ಬಾಲ್ಯದ ವಿಕಸನ ಮುಗ್ಧವಾಗಿರಬೇಕು. ಮೆಚ್ಯುರಿಟಿ ಸಂಸ್ಕೃತಿಯಿಂದ ಸಾಧ್ಯ ಎಂದರು.

ನಮ್ಮ ನಾಗರೀಕತೆಯ ಓಟದಲ್ಲಿ, ವೇಗವಾಗಿ ಓಡುತ್ತಾ ಎಲ್ಲವನ್ನು ಕಳೆದುಕೊಳ್ಳುತ್ತಿದ್ದೇವೆ. ನಮ್ಮ ಚಿಂತನೆ ಹಾಳಾಗಿದೆ. ಮೌಲ್ಯ ಅರ್ಥಹೀನವಾಗಿದೆ. ನಮ್ಮ ನೈತಿಕ ಮೌಲ್ಯಗಳನ್ನು ನಮ್ಮ ಮೊಮ್ಮಕ್ಕಳಿಗೆ ಸಾಗಿಸಬೇಕಾಗಿದೆ. ನನ್ನ ಮಗನಿಗೆ ಕಲಿಸುವುದು ಕರ್ತವ್ಯ (ಡ್ಯೂಟಿ). ಈಗಿನ ಸಂದರ್ಭದಲ್ಲಿ ನಮ್ಮ ಮನೆಗಳಲ್ಲಿ ಅಪ್ಪನ ಫೋಟೋ ಕೂಡ ಇಲ್ಲ. ಇನ್ನು ಅಜ್ಜನ ಫೋಟೋ ಇಲ್ಲವೇ ಇಲ್ಲ. ಇನ್ನು ಮೌಲ್ಯ ಎಲ್ಲಿ ಉಳಿದಿದೆ ಎಂದರು.

ಜಗತ್ತಿನ ಶಾಂತಿ ಮತ್ತು ಜಗತ್ತಿನ ಅರಿವಿಗೆ, ಚಿಂತನೆಗೆ ರೋಟರಿ ಅಂತರ ರಾಷ್ಟ್ರೀಯವಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ನಾವು ಸಚ್ಚಾರಿತ್ರ್ಯ ಸದ್ಭಾವ, ಸೌಹಾರ್ದತೆ ಎಂಬ ಮೂರು ಜನರನ್ನು ಹೊಂದಿರಬೇಕು. ಪ್ರತಿಭೆ, ಪರಿಶ್ರಮ, ಪ್ರಯತ್ನ ಸ್ವತಃ ನಮ್ಮಿಂದ ಆಗಲಿ, ತನ್ಮೂಲಕ ವಿಶ್ವಶಾಂತಿಗೆ ನಾಂದಿಯಾಗಲಿ ಎಂದರು. ಇಲ್ಲಿನ 15 ರೋಟರಿ ಕ್ಲಬ್‌ಗಳು ಹಲವಾರು ಕಾರ್ಯಗಳನ್ನು ಸವಾಲಾಗಿ ತೆಗೆದುಕೊಂಡು ರಾಷ್ಟ್ರಮಟ್ಟದಲ್ಲಿ ತಮ್ಮ ಹೆಗ್ಗುರುತನ್ನು ಮೂಡಿಸುವಂತಾಗಲಿ. ಸೊಪ್ಪಿದೆ, ಉಪ್ಪಿದೆ, ತುಪ್ಪವಿದೆ, ಕೊಪ್ಪರಿಗೆ ಇದೆ ನಮ್ಮ ಆಸೆಗೆ ಕೊನೆಯಿಲ್ಲ. ನಮ್ಮನ್ನು ಒಂದು ಸಣ್ಣ ಚಿಪ್‌ನಲ್ಲಿ ಹಿಡಿದಿಡಲಾಗಿದೆ. ಆದ್ದರಿಂದ ನಮ್ಮ ಸುಂದರವಾದ ಬಾಳನ್ನು ಮಾಗಿದ ಹಣ್ಣನ್ನಾಗಿ ಪರಿವರ್ತಿಸಿಕೊಳ್ಳೋಣ. ನಾವು ಮಾಗಿದ್ದು ಯಾರಿಗೂ ಗೊತ್ತಾಗುವುದು ಬೇಡ. 30–40 ರ ಪ್ರಾಯದ ಹಾಗೇ ಇರೋಣ. ಮಾಗದ ಹಾಗೇ ಇರೋಣ. ಮಾನವ ಮುಖ ನಮಗಿರಲಿ. ಸಿಕ್ಕಿರುವ ಅವಕಾಶವನ್ನು ಬಳಸಿ ಅಳವಡಿಸಿಕೊಳ್ಳುವುದೇ ಯಶಸ್ಸು. ಅದು ಬಹಳ ಕಾಲ ಇರುತ್ತದೆ ಎಂದರು.

ಹೀಗೆ ಮುಂಖಾನುಮುಂಖವಾಗಿ ನಮ್ಮ ಜೀವನ, ಯಶಸ್ಸು, ಮೌಲ್ಯ ಮತ್ತಿತರ ನಮ್ಮ ಗುಣಾವಗುಣಗಳನ್ನು ವಿಮರ್ಷಿಸುತ್ತಾ, ಎಲ್ಲರಿಗೂ ಸಾಧ್ಯವಾದಷ್ಟು ಒಳ್ಳೆಯದನ್ನು ಮಾಡೋಣ ಎನ್ನುತ್ತಾ ನಾವು ಒಳ್ಳೆಯುದಕ್ಕಾಗಿಯೇ ಇಲ್ಲಿಗೆ ಬಂದಿದ್ದು ಅದನ್ನು ಮೈಗೂಡಿಸಿಕೊಳ್ಳೋಣ ಎಂದು ತಮ್ಮ ಮಾತನ್ನು ಮುಗಿಸಿದರು.

ಅಚ್ಚುಕಟ್ಟಾಗಿ ಸಭೆಯನ್ನು ನಿರ್ವಹಿಸಿದ ರೋಟರಿ ಕ್ಲಬ್, ಮಲ್ನಾಡ್‌ನ ಅಧ್ಯಕ್ಷರಾದ ರೊ.ಪ್ರಕಾಶ್‌ರವರು ಅಧ್ಯಕ್ಷೀಯ ಮಾತುಗಳನ್ನು ಆಡಿದರು. ರೊ.ಎನ್.ಜಿ. ಉಷಾರವರು ಕವನ ವಾಚನ ಮಾಡಿದರು. ರೊ. ಉಜ್ವಲ್ ರವಿಯವರು ವಂದನಾರ್ಪಣೆ ಮತ್ತು ನಿರೂಪಣೆ ಮಾಡಿದರು. ರೊ. ವಸಂತ್ ಹೋಬಳೀದಾರ್ ಮತ್ತಿತರರು ಸೇರಿ ಮುಖ್ಯ ಅತಿಥಿಗಳಿಗೆ ಗೌರವಿಸಿ ಕೃತಜ್ಞತೆ ತಿಳಿಸಿದರು.

ಕಾರ್ಯಕ್ರಮದ ನಂತರ ಡಿಜೆ ಹಾಗೂ ವಿಶೇಷ ಭೋಜನ ವ್ಯವಸ್ಥೆಯಾಗಿತ್ತು.

⌘



## ಸಂಪಾದಕೀಯ

### ದೃಢ ವ್ಯಕ್ತಿತ್ವದ ಮಹತ್ವ

ಒಂದೂರಲ್ಲಿ ಒಬ್ಬ ವ್ಯಕ್ತಿಯಿದ್ದ. ಅವನದ್ದೊಂದು ಗುಣ ಏನೆಂದರೆ ಯಾರೇ ಸಿಕ್ಕಿದರೂ ಅವರಿಗೆ ನಮಸ್ಕಾರ ಹೇಳಿ, 'ಹೇಗಿದ್ದೀರಿ' ಎಂದು ಕುಶಲ ವಿಚಾರಿಸುವುದು. ಆದರೆ ಅದೇ ಊರಲ್ಲಿ ಇನ್ನೊಬ್ಬ ವಿಚಿತ್ರ ವ್ಯಕ್ತಿಯಿದ್ದ. ಈ ಎಲ್ಲರಿಗೂ ನಮಸ್ಕಾರ ಹೇಳುವವನು ಇದ್ದಾನಲ್ಲ, ಅವನೇನಾದರೂ ಸಿಕ್ಕಿ ನಮಸ್ಕಾರ ಎಂದರೆ ಇವನು ಕೆಟ್ಟ ಪದಗಳಿಂದ ಬಯ್ಯುತ್ತಿದ್ದ. ಪ್ರತೀ ಬಾರಿಯೂ ಹಾಗೆಯೇ ಆಗುತ್ತಿತ್ತು. ಒಮ್ಮೆ ಯಾರೋ ಊರಿನವರೇ ಈ ವ್ಯಕ್ತಿಗೆ ಹೇಳಿದರು. 'ಅಲ್ಲ ಮಾರಾಯ, ನೀನು ನೋಡಿದರೆ ಯಾವಾಗಲೂ ಅವನಿಗೆ ನಮಸ್ಕಾರ ಅನ್ನುತ್ತೀಯಾ, ಆದರೆ ಅವನು ಪ್ರತೀ ಸಲ ಕೆಟ್ಟ ಮಾತನ್ನೇ ಆಡುತ್ತಾನೆ. ಬಿಟ್ಟು ಬಿಡು. ಅವನಿಗೆ ನಮಸ್ಕಾರ ಮಾಡುವುದೇಕೆ' ಆಗ ಆ ವ್ಯಕ್ತಿ ಕೊಟ್ಟ ಉತ್ತರ ಬಹು ಸುಂದರವಾದದ್ದು. ಅವನೆಂದ, 'ನೀವು ಹೇಳುವುದೇನೋ ಸರಿ. ಆದರೆ ನನಗೋಸ್ಕರ ಅವನು ತನ್ನ ಕೆಟ್ಟ ಸ್ವಭಾವವನ್ನೇ ಬಿಡಲು ತಯಾರಿಲ್ಲ ಅಂದ ಮೇಲೆ ನಾನು ಅವನಿಗೋಸ್ಕರ ನನ್ನ ಒಳ್ಳೆಯ ಸ್ವಭಾವವನ್ನು ಯಾಕೆ ಬಿಡಲಿ?'

ಎಂತಹ ಉತ್ತರ...! ಈ ಉತ್ತರ ಬಹಳ ಸರಳವಾದದ್ದು. ಆದರೆ ಇದರ ಅರ್ಥ ತುಂಬಾ ದೊಡ್ಡದು. ನಾವು ಏನನ್ನಾದರೂ ಸಾಧಿಸಬೇಕೆಂದು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತಲೇ ಇರುತ್ತೇವೆ. ಒಳ್ಳೆಯ ಸ್ವಭಾವವನ್ನು ಅಳವಡಿಸಿಕೊಳ್ಳಬೇಕೆಂದು ಕಷ್ಟಪಡುತ್ತಿರುತ್ತೇವೆ. ಮಾಡಿದ ತಪ್ಪನ್ನು ಸುಧಾರಿಸಿಕೊಳ್ಳಬೇಕೆಂದು ಬದಲಾಗಲು ಯತ್ನಿಸುತ್ತಿರುತ್ತೇವೆ. ಆದರೆ ಕೆಲವೊಮ್ಮೆ ಅದಕ್ಕೆ ನಮ್ಮ ಸುತ್ತಲಿನವರ ಪ್ರತಿಕ್ರಿಯೆ ಅಷ್ಟು ಸ್ವಾಗತಾರ್ಹವಾಗಿರುವುದಿಲ್ಲ. ಯಾಕೆಂದರೆ ಜಗತ್ತು ನಾವು ನಿರೀಕ್ಷಿಸುವ ಹಾಗೆ ನಮ್ಮೊಂದಿಗೆ ನಡೆದುಕೊಳ್ಳುವುದಿಲ್ಲ. ಹಾಗೆಂದು ಅದಕ್ಕಾಗಿ ಕೋಪಿಸಿಕೊಂಡು ಅಥವಾ ಮನನೊಂದು ನಮ್ಮ ಪ್ರಯತ್ನ ಬಿಡಬಾರದು. ಉದಾಹರಣೆಗೆ, ನಾವು ನಮ್ಮನ್ನು ನಾವೇನು ಸಾಧಿಸಬಹುದು ಎಂಬುದರ ಮೇಲೆ ಅಳೆಯುತ್ತಿರುತ್ತೇವೆ. ನಾವೇನು ಸಾಧಿಸಿದ್ದೇವೆ ಎಂಬುದರ ಮೇಲೆ ನಮ್ಮನ್ನು ಜಗತ್ತು ಅಳೆಯುತ್ತದೆ. ಹಾಗಾಗಿ ನಮ್ಮ ಬಗ್ಗೆ ನಾವು ಅಂದುಕೊಂಡಿರುವ ಅಭಿಪ್ರಾಯದ ಮೇಲೆ ಜಗತ್ತು ನಮ್ಮನ್ನು ನಡೆಸಿಕೊಳ್ಳಬೇಕೆಂದು ಯೋಚಿಸಬಾರದು.

ಹಾಗಾಗಿ, ಯಾರೇನೇ ಪ್ರತಿಕ್ರಿಯೆ ನೀಡಿದರೂ ತಣ್ಣಗೆ ಅದನ್ನು ಸ್ವೀಕರಿಸಿ ಅದರಲ್ಲಿ ಹುರುಳಿಲ್ಲದಿದ್ದರೆ ಬಿಡುವುದು, ಏನಾದರೂ ಸುಧಾರಿಸಿಕೊಳ್ಳುವ ಅಂಶವಿದ್ದರೆ ಸ್ವೀಕರಿಸುವುದು ಇಷ್ಟೇ ಮಾಡಬೇಕೇ ವಿನಾಃ ಯಾರೋ ಏನೋ ಅಂದರೆಂದು ಪ್ರಯತ್ನವನ್ನೇ ಬಿಟ್ಟು ಬಿಡುವುದು, ಅವಮಾನಿತರಾಗಿ ಆತ್ಮಹತ್ಯೆಯಂತಹ ತೀರ್ಮಾನ ಕೈಗೊಳ್ಳುವುದು ಮೂರ್ಖತನ. ದೃಢ ನಿರ್ಧಾರದ ಮನುಷ್ಯರು ಇಲ್ಲದೇ ಹೋದರೆ ಈ ಜಗತ್ತು ಈಗಿರುವುದಕ್ಕಿಂತ ಸಾವಿರಾರು ವರ್ಷ ಹಿಂದಿರುತ್ತಿತ್ತು. ಮನುಷ್ಯ ಸಾಧಿಸಿದ ಅದ್ಭುತಗಳು ಕನಸಾಗಿಯೇ ಉಳಿಯುತ್ತಿದ್ದವು. ತಾಳ್ಮೆ ಮತ್ತು ವಿವೇಚನೆಯಿರುವ ವ್ಯಕ್ತಿಗಳು ಜಗತ್ತನ್ನೇ ಆಳುತ್ತಾರೆ. ಅವರು ಬೇರೆ ಯಾರಿಗೋಸ್ಕರವೋ ತಾನು ನಡೆಯುತ್ತಿರುವ ಯೋಗ್ಯ ದಾರಿಯನ್ನು ಬಿಟ್ಟು ಹೋಗುವುದಿಲ್ಲ. ಕಷ್ಟವಾದರೂ ಅದರಲ್ಲೇ ಮುನ್ನಡೆಯುತ್ತಾರೆ. ಇತರರಿಗೆ ಅರ್ಹ ಮಾದರಿಯಾಗುತ್ತಾರೆ.

• ರೊ. ಎಂ. ಮಾಧವಾಚಾರ್

> Rotary
>
> **Rotary opens opportunities for you to live a richer more meaningful life, with friends around the world, based on our core values.**
>
> Holger Knaack


### ಅಭಿನಂದನೆಗಳು:

ನಮ್ಮ ಕ್ಲಬ್‌ನ ರೊ. ಎ. ಮಂಜುನಾಥ್ (ನಮ್ಮ ರೋಟರಿ ಕ್ಲಬ್‌ನ ಮಾಜಿ ಅಧ್ಯಕ್ಷರು) ರೊ.ರವೀ ಪಾಟೀಲ್ (ನಮ್ಮ ಕ್ಲಬ್‌ನ ಮಾಜಿ ಕಾರ್ಯದರ್ಶಿಗಳು) ರೊ. ರಾಕೇಶ್‌ಗೌಡ (ನಮ ಕ್ಲಬ್ ಮಾಜಿ ನಿರ್ದೇಶಕರು) ನಗರದ ಕಂಟ್ರಿ ಕ್ಲಬ್‌ನಲ್ಲಿ ಇತ್ತೀಚೆಗೆ ನಡೆದ ನಿರ್ದೇಶಕರ ಚುನಾವಣೆಯಲ್ಲಿ ಗೆದ್ದು ಯಶಸ್ವಿಯಾಗಿದ್ದಾರೆ. ಅವರಿಗೆ ನಮ್ಮ ಕ್ಲಬ್‌ನ ಎಲ್ಲಾ ಸದಸ್ಯರುಗಳ ಪರವಾಗಿ ಅಭಿನಂದನೆಗಳು



### ಮುದ್ದುರಾಮನ ಚೌಪದಿ...

**ಸಮರ ಸಾರುವ ಬದಲು ತೋರಿ ಶಾಂತಿ ಪತಾಕೆ**
**ಕೋಪತಾಪದ ಬದಲು ತೋರು ಸೈರಣೆಯ**
**ಬಾಣಬಿರುಸಿನ ಬದಲು ತೋರು ಮಲ್ಲಿಗೆ ಮಾಲೆ**
**ಅಮಿತ ಪ್ರೀತಿಯ ತೋರೋ ! – ಮುದ್ದುರಾಮ**







### 8. Peace and Conflict Prevention/ Resolution month

- Organise model United Nations Assembly at college levels.
- Engage in reconciliation or restoring relationships.
- Organise cultural programs bringing together the citizens of different states/ countries/ religions.
- Organise poster making and slogan writing competitions on World Peace and National Integration.

To,

*Book Post*

ಮುದ್ರಣ: ರಾಯಲ್ ಪ್ರಿಂಟರ್ಸ್, ಶಿವಮೊಗ್ಗ, 98862 73495